ಪ್ರಜಾವಾಣಿ

# ಕ್ರಿಕೆಟ್: ಜೈನ್ ವಿ.ವಿ.ಗೆ ಅಗ್ರಪಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಿದ ಮೂರು ಲೀಗ್ ಪಂದ್ಯಗಳಲ್ಲಿಯೂ ಗೆಲುವು ಸಾಧಿಸಿದ ಸದರ್ನ್ ಚಾಂಪಿಯನ್ಸ್ (ಜೈನ್ ವಿ.ವಿ. ತಂಡ) ಟೊಯೊಟೊ ಯೂನಿವರ್ಸಿಟಿ ಟ್ವೆಂಟಿ–20 ಕ್ರಿಕೆಟ್ ಚಾಂಪಿಯನ್ ಷಿಪ್‌ನ 'ಎ' ಗುಂಪಿನಲ್ಲಿ ಅಗ್ರಸ್ಥಾನ ಪಡೆದುಕೊಂಡಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ನಡೆದ ಮೂರನೇ ಹಾಗೂ ಕೊನೆಯ ಲೀಗ್ ಪಂದ್ಯದಲ್ಲಿ ಜೈನ್ ವಿ.ವಿ. ತಂಡ ನಾರ್ದನ್ ಸ್ಟಾಲಿನ್ಸ್ (ಅಲಿಘಡ ಮುಸ್ಲಿಂ ವಿ.ವಿ) ಎದುರು ಐದು ವಿಕೆಟ್‌ಗಳ ಗೆಲುವು ಸಾಧಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಅಲಿಘಡ ವಿವಿ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 105 ರನ್ ಗಳಿಸಿತು. ಈ ಗುರಿ ಜೈನ್ ಆಟಗಾರರಿಗೆ ಸವಾಲು ಎನ್ನಿಸಲಿಲ್ಲ. ಈ ತಂಡ 18.4 ಓವರ್ ಗಳಲ್ಲಿ ಐದು ವಿಕೆಟ್ ಕಳೆದುಕೊಂಡು ಗೆಲುವು ಸಾಧಿಸಿತು.

ಕೌನೈನ್ ಅಬ್ಬಾಸ್ (ಔಟಾಗದೆ 44) ಹಾಗೂ ಸಮರ್ಥ ರವಿಕುಮಾರ್ (25) ಜೈನ್ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.




ಜೈನ್ ವಿವಿ ತಂಡದ ಶ್ರೇಯಸ್ ಗೋಪಾಲ್ ಸಹ ಆಟಗಾರರೊಂದಿಗೆ ಸಂಭ್ರಮಿಸಿದ ಕ್ಷಣ -ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸ್ಕೋರು: ಅಲಿಘಡ ಮುಸ್ಲಿಂ ವಿ.ವಿ. 20 ಓವರ್‌ಗಳಲ್ಲಿ 9 ವಿಕೆಟ್‌ಗೆ 105. (ಯಾಸಿರ್ ಕಲೀಮ್ 30, ಶ್ರೇಯಸ್ ಗೋಪಾಲ್ 12ಕ್ಕೆ3). ಜೈನ್ ವಿ.ವಿ. 18.4 ಓವರ್‌ಗಳಲ್ಲಿ 5 ವಿಕೆಟ್‌ಗೆ 106. (ಕೌನೈನ್ ಅಬ್ಬಾಸ್ ಔಟಾಗದೆ 44, ಸಮರ್ಥ ರವಿ ಕುಮಾರ್ 25; ರೋಹಿತ್ ಸೈನಿ 18ಕ್ಕೆ2). ಫಲಿತಾಂಶ: ಜೈನ್‌ಗೆ 5 ವಿಕೆಟ್ ಜಯ.